ಕರ್ನಾಟಕ ಅರಣ್ಯ ಇಲಾಖೆ

**ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ – 577401**

Office of the Deputy Conservator of Forests, Sagar Forest Division, Sagar– 577401

**Phone No. : 08183 226071** **Email: :** Sagardcf@rediffmail.com

ಕ್ರ:ಬಿ1/ಭೂಮಿ/ಎಫ್.ಸಿ/ತುಂಗಭದ್ರಾ ಯೋಜನೆ/ FP/KA/WATER/139640 /2021 ದಿ: 07-06-2021

ಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಶಿವಮೊಗ್ಗ ವೃತ್ತ, ಶಿವಮೊಗ್ಗ

ಮಾನ್ಯರೇ,

ವಿಷಯ:- Diversion of 2.354Ha of forest land in Sy. No. 59 of Adaganti village and Sy. No. 32 of Kaginalli village, Shikaripura Taluk, Shivamogga district & Sy No. 127, 153 of Varaha Vilage, Sy No.291 of Nagavandha Vilage in Haveri District for the Construction of raising main to fill MI/ZP tanks by lifting 1.5 TMC of water from Tungabhadra River under Udugani, Talagunda and Hosuru (UTH) Tank filling in favor of the Executive Engineer, Karnataka Neeravari Nigam Limited (KNNL)., Dandavathi Resrvoir Project Division Shikaripura Taluk, Shivamogga District

ಉಲ್ಲೇಖ:-

1. ಪರಿವೇಶ್ ತಂತ್ರಾಂಶದಲ್ಲಿ ಸಲ್ಲಿಕೆಯಾದ ಎಫ್.ಸಿ ಪ್ರಸ್ತಾವನೆ ಸಂಖ್ಯೆ : FP/KA /WATER/139640/2021
2. Executive Engineer, Karnataka Neeravari Nigam Limited (KNNL)., Dandavathi Resrvoir Project Division Shikaripura Taluk, Shivamogga District ಇವರ ಕಛೇರಿ ಪತ್ರ ಸಂಖ್ಯೆ:EE/KNNL /DN/SKP/PB/UTH-Forest/2021-22/179 Dt:15.05.2021 & 246 / 26.05.2021.
3. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ: 19.05.2021, 29.05.2021 ಹಾಗೂ 04.06.2021 (ಘಟಕಧಿಕಾರಿಗಳಿಗೆ ವಿಳಾಸಿಸಿದ ಪತ್ರ)
4. ವಲಯ ಅರಣ್ಯಾಧಿಕಾರಿ, ಶಿಕಾಳಕೊಪ್ಪ ವಲಯ, ಶಿರಾಳಕೊಪ್ಪ ಇವರ ಕಛೇರಿ ಪತ್ರ ಸಂಖ್ಯೆ 66/2021-22 ದಿನಾಂಕ: 31.05.2021.
5. ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ, ಶಿಕಾರಿಪುರ ಇವರ ಕಛೇರಿ ಪತ್ರ ಸಂಖ್ಯೆ: 02/2021-22 ದಿನಾಂಕ: 04.06.2021.
6. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಶಿಕಾರಿಪುರ ಉಪ ವಿಭಾಗ, ಶಿಕಾರಿಪುರ ಇವರ ಕಛೇರಿ ಪತ್ರ ಸಂಖ್ಯೆ: 93/2021-22 ದಿನಾಂಕ: 05.06.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಯವರು ಉಲ್ಲೇಖಿತ(1)ರಲ್ಲಿ ಅರಣ್ಯ ಇಲಾಖೆಯ ಪರಿವೇಶ್ ತಂತ್ರಾಂಶದಲ್ಲಿ FP/KA/WATER/139640/2021 ಪ್ರಸ್ತಾವನೆಯನ್ನು ಸಲ್ಲಿಸಿ

ಉಲ್ಲೇಖಿತ(2)ರಲ್ಲಿ ಯೋಜನೆಗೆ ಸಂಬಂಧಪಟ್ಟಂತೆ 08 ಸೆಟ್ ಬುಕ್‌ಲೇಟ್‌ಗಳನ್ನು ಈ ಕಛೇರಿಗೆ ಸಲ್ಲಿಸಿರುವಂತೆ, ಸದರಿ ಪ್ರಸ್ತಾವನೆಯ ಅನುಸಾರ ಉಲ್ಲೆಖಿತ(3)ರಲ್ಲಿ ಕರ್ನಾಟಕ ಅರಣ್ಯ ಸಂರಕ್ಷಣಾ ಕಾಯ್ದೆ 1980 ಸೆಕ್ಷನ್–2ರಂತೆ ಅರಣ್ಯ ಭೂಮಿ ಬಿಡುಗಡೆಗೆ ಕೋರಿರುವ ಪ್ರದೇಶವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಘಟಕಧಿಕಾರಿಗಳಿಗೆ ನಿರ್ದೇಶನವನ್ನು ನೀಡಿದ್ದು ಆ ಪ್ರಕಾರ ಪ್ರಸ್ತಾಪಿತ ಪ್ರದೇಶವನ್ನು ಪರಿಶೀಲಿಸಿ ಅಗತ್ಯ ದಾಖಲಾತಿಗಳೊಂದಿಗೆ ಉಲ್ಲೇಖಿತ (4) & (5)ರಲ್ಲಿ ವಲಯ ಅರಣ್ಯಾಧಿಕಾರಿ, ಶಿಕಾಳಕೊಪ್ಪ ವಲಯ ಹಾಗೂ ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ ಇವರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿಕಾರಿಪುರ ಉಪ ವಿಭಾಗ, ಶಿಕಾರಿಪುರ ಇವರ ಮುಖಾಂತರ ಪ್ರಸ್ತಾವನೆ ಸಲ್ಲಿಸಿದ್ದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿಕಾರಿಪುರ ಉಪ ವಿಭಾಗ ಇವರು ಪ್ರಸ್ತಾಪಿತ ಪ್ರದೇಶವನ್ನು ದಿನಾಂಕ:05.06.2021ರಂದು ಸ್ಥಳ ಪರಿಶೀಲಿಸಿ ವಲಯ ಅರಣ್ಯಾಧಿಕಾರಿಗಳ ವರದಿಯನ್ನು ಅನುಮೋದಿಸಿ ಪ್ರಸ್ತಾವನೆಯ 08 ಸೆಟ್ ಬುಕ್‌ಲೇಟ್‌ಗಳನ್ನು ಮುಂದಿನ ಕ್ರಮಕ್ಕಾಗಿ ಉಲ್ಲೆಖಿತ(6)ರಲ್ಲಿ ಈ ಕಚೇರಿಗೆ ಸಲ್ಲಿಸಿರುತ್ತಾರೆ.

ಮುಂದುವರೆದು, ಉಪಯೋಗಿ ಸಂಸ್ಥೆಯವರು ಅರಣ್ಯ ಭೂಮಿ ಬಿಡುಗಡೆಗೆ ಕೋರಿರುವ ಪ್ರದೇಶವನ್ನು ನಾನು ದಿನಾಂಕ:06.06.2021ರಂದು ಸ್ಥಳ ಪರಿಶೀಲಿಸಿ ಈ ಕೆಳಕಂಡ ಅಂಶಗಳನ್ನು ಮುಂದಿನ ಕ್ರಮಕ್ಕಾಗಿ ಒಪ್ಪಿಸುತ್ತಿದ್ದೇನೆ.

- ಉಪಯೋಗಿ ಸಂಸ್ಥೆಯವರು ಅರಣ್ಯ ಭೂಮಿ ಬಿಡುಗಡೆಗೆ ಕೋರಿರುವ ಶಿಕಾರಿಪುರ ತಾಲ್ಲೂಕು, ಅಡಗಂಟಿ ಗ್ರಾಮದ ಸ.ನಂ:59ರ ಪ್ರದೇಶವು ಸರ್ಕಾರಿ ಅಧಿಸೂಚನೆ ಸಂಖ್ಯೆ: G 4656-FT 20-28-31 Dt:28.09.1929 ರಂತೆ 244.30 ಎ/ಗು ಪ್ರದೇಶವು **"ಅಡಗಂಟಿ ಕಿರು ಅರಣ್ಯ"** ಪ್ರದೇಶದ ವ್ಯಾಪ್ತಿಗೆ ಬರುತ್ತಿದ್ದು ಬಿಡುಗಡೆಗೆ ಕೋರಿರುವ ವಿಸ್ತೀರ್ಣವು 0.280 ಹೇಕ್ಟರ್ ಆಗಿರುತ್ತದೆ.
- ಉಪಯೋಗಿ ಸಂಸ್ಥೆಯವರು ಅರಣ್ಯ ಭೂಮಿ ಬಿಡುಗಡೆಗೆ ಕೋರಿರುವ ಶಿಕಾರಿಪುರ ತಾಲ್ಲೂಕು, ಕಾಗಿನಲ್ಲಿ ಗ್ರಾಮದ ಸ.ನಂ:32ರ ಪ್ರದೇಶವು ಸರ್ಕಾರಿ ಅಧಿಸೂಚನೆ ಸಂಖ್ಯೆ: AF.1398-Ft-33-40-2 Dt:06.09.1940 ರಂತೆ 2545.13 ಎ/ಗು ಪ್ರದೇಶವು **"ಕಾಗಿನಲ್ಲಿ ಕಿರು ಅರಣ್ಯ"** ಪ್ರದೇಶದ ವ್ಯಾಪ್ತಿಗೆ ಬರುತ್ತಿದ್ದು ಬಿಡುಗಡೆಗೆ ಕೋರಿರುವ ವಿಸ್ತೀರ್ಣವು 0.421 ಹೇಕ್ಟರ್ ಆಗಿರುತ್ತದೆ.
- ಉಪಯೋಗಿ ಸಂಸ್ಥೆಯವರು ಅರಣ್ಯ ಭೂಮಿ ಬಿಡುಗಡೆಗೆ ಕೋರಿರುವ ಒಟ್ಟು 2.354 ಹೇಕ್ಟರ್ ವಿಸ್ತೀರ್ಣದಲ್ಲಿ ಈ ವಿಭಾಗಕ್ಕೆ 0.701 ಹೇಕ್ಟರ್ ವಿಸ್ತೀರ್ಣ ಬರುತ್ತಿದ್ದು ಉಳಿದಂತಹ ವಿಸ್ತೀರ್ಣ ಹಾವೇರಿ ವಿಭಾಗಕ್ಕೆ ಸೇರಿರುತ್ತದೆ.
- ಪ್ರಸ್ತಾವನೆಯ ಬುಕ್‌ಲೆಟ್‌ನಲ್ಲಿ ಇರುವಂತೆ ಯೋಜನಾ ಪ್ರದೇಶದ ಮಾರ್ಗದ ಸ್ಥಳದ ಜಿ.ಪಿ.ಎಸ್ ನಿರ್ದೇಶಾಂಕಗಳನ್ನು ಉಪಯೋಗಿ ಸಂಸ್ಥೆಯು ಸಲ್ಲಿಸಿರುವ ನಕಾಶೆಯಿಂದ ಪಡೆದು ಮ್ಯಾಪ್ ಸೋರ್ಸ್ ನಕಾಶೆ ಹಾಗೂ ಗೂಗಲ್ ಅರ್ಥ್ ನಕಾಶೆಯನ್ನು ತಯಾರಿಸಿದ್ದು ಇದರಲ್ಲಿ ನಿರ್ಧಿಷ್ಟವಾಗಿ ಅರಣ್ಯ ಪ್ರದೇಶದ ವಿಸ್ತೀರ್ಣವನ್ನು ನಮೂದಿಸಲಾಗಿರುತ್ತದೆ.
- ಅರಣ್ಯ ಭೂಮಿ ಬಿಡುಗಡೆಗೆ ಕೋರಿರುವ 0.701 ಹೆಕ್ಟರ್ ಪ್ರದೇಶದಲ್ಲಿ ಕಡಿತಲೆ ಮಾಡಬೇಕಾಗಿರುವ ಮರಗಳು ಇರುವುದಿಲ್ಲ.
- ಯೋಜನಾ ಪ್ರದೇಶವು ಎಫ್.ಸಿ ಗೈಡ್ ಲೈನ್ಸ್ ಪ್ರಕಾರ ಯಾವ ಎಕೋ–ಕ್ಲಾಸ್‌ನಲ್ಲಿ ಬರುವುದಿಲ್ಲ ಹಾಗೂ ಅನುಮೋದಿತ ಕಾರ್ಯಯೋಜನೆಯಲ್ಲಿ ಸದರಿ ಪ್ರದೇಶವು ಪಥ ಬದಲಾವಣೆಗೆ ಪ್ರಸ್ತಾಪಿಸಲಾಗಿರುವುದಿಲ್ಲ.
- ಯೋಜನಾ ಪ್ರದೇಶದ ಮಾರ್ಗವನ್ನು ನಕಾಶೆಯ ಪ್ರಕಾರ ಪರಿಶೀಲಿಸಲಾಗಿ, ಅಡಗಂಟಿ ಯೋಜನಾ ಪ್ರದೇಶದಲ್ಲಿ ಪ್ರಾರಂಭದಲ್ಲಿ ಶೇ.45% ರಷ್ಟು ಇಳಿಜಾರು ಪ್ರದೇಶವಾಗಿದ್ದು, ನಂತರ ಸಮತಟ್ಟು ಪ್ರದೇಶವಾಗಿರುತ್ತದೆ. ಈ ಪ್ರದೇಶದಲ್ಲಿ ಯಾವುದೇ ಮರ–ಗಿಡಗಳು ಇರುವುದಿಲ್ಲ. ಪ್ರಸ್ತಾಪಿತ ಯೋಜನೆಯನ್ನು ಜಾರಿಗೊಳಿಸಿದ್ದಲ್ಲಿ ಅರಣ್ಯಕ್ಕೆ ಯಾವುದೇ ಹಾನಿಯಾಗುವುದಿಲ್ಲ.

- ಯೋಜನಾ ಪ್ರದೇಶದ ಮಾರ್ಗವನ್ನು ನಕಾಶೆಯ ಪ್ರಕಾರ ಪರಿಶೀಲಿಸಲಾಗಿ, ಕಾಗಿನಲ್ಲಿ ಯೋಜನಾ ಪ್ರದೇಶದಲ್ಲಿ ಪೈಪ್‌ಲೈನ್ ಹಾಕುವ ಪ್ರದೇಶವು ಗುಡ್ಡದ ಕೆಳಭಾಗದಲ್ಲಿದ್ದು, ರಸ್ತೆ ಅಂಚಿನಲ್ಲಿರುತ್ತದೆ. ಇಲ್ಲಿಯೂ ಸಹ ಯಾವುದೇ ಮರಗಿಡಗಳು ಇಲ್ಲದೇ ಇರುವುದರಿಂದ ಅರಣ್ಯಕ್ಕೆ ಯಾವುದೇ ಹಾನಿಯಾಗುವುದಿಲ್ಲ.
- ಯೋಜನಾ ಪ್ರದೇಶದ ಮಾರ್ಗವನ್ನು ನಕಾಶೆಯ ಪ್ರಕಾರ ಪರಿಶೀಲಿಸಲಾಗಿ, ಅಡಗಂಟಿ ಯೋಜನಾ ಪ್ರದೇಶದ ದಕ್ಷಿಣಕ್ಕೆ "ಚಂದ್ರಕಲಾ ಮೀಸಲು ಅರಣ್ಯ" ಪ್ರದೇಶವಿದ್ದು ಸದರಿ ಪ್ರದೇಶವು ಸೂಕ್ಷ್ಮಪ್ರದೇಶ/ಅಭಯಾರಣ್ಯ ಪ್ರದೇಶಕ್ಕೆ ಒಳಪಡುವುದಿಲ್ಲ ಮತ್ತು ಸದರಿ ಪ್ರದೇಶದ ಹತ್ತಿರ ಪುರಾತತ್ವ /ಪಾರಂಪಾರಿಕ ಸ್ಥಳಗಳು ಇರುವುದಿಲ್ಲ.
- ಯೋಜನಾ ಪ್ರದೇಶದ ಮಾರ್ಗವನ್ನು ನಕಾಶೆಯ ಪ್ರಕಾರ ಪರಿಶೀಲಿಸಲಾಗಿ, ಕಾಗಿನಲ್ಲಿ ಯೋಜನಾ ಪ್ರದೇಶದ ಪೂರ್ವಕ್ಕೆ "ಮಾದೇನಹಳ್ಳಿ ರಾಜ್ಯ ಅರಣ್ಯ" ಪ್ರದೇಶವಿರುತ್ತದೆ. ಸದರಿ ಪ್ರದೇಶವು ಸೂಕ್ಷ್ಮಪ್ರದೇಶ/ಅಭಯಾರಣ್ಯ ಪ್ರದೇಶಕ್ಕೆ ಒಳಪಡುವುದಿಲ್ಲ ಮತ್ತು ಸದರಿ ಪ್ರದೇಶದ ಹತ್ತಿರ ಪುರಾತತ್ವ /ಪಾರಂಪಾರಿಕ ಸ್ಥಳಗಳು ಇರುವುದಿಲ್ಲ.

ಆದ್ದರಿಂದ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಘಟಕಾಧಿಕಾರಿಗಳು ಸಲ್ಲಿಸಿರುವ ಪರಿಶೀಲನಾ ವರದಿಯನ್ನು ನಾನು ಸಹ ಅನುಮೋದಿಸುತ್ತಾ Site Inspection Report & Recommendation Letter ಹಾಗೂ ಅರಣ್ಯ ಭೂಮಿ ಬಿಡುಗಡೆಗೆ ಪರ್ಯಾಯವಾಗಿ ಪರಿಹಾರಾತ್ಮಕ ನೇಡುತೋಪು ಪ್ರದೇಶದ ವಿವರವನ್ನು ಒಳಗೊಂಡ 07 ಸೆಟ್ ಬುಕ್‌ಲೇಟ್‌ಗಳನ್ನು ಈ ಲಗತ್ತು ಸಲ್ಲಿಸುತ್ತಾ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಪ್ರಕಾರ ಅರಣ್ಯ ಭೂಮಿ ಬಿಡುಗಡೆಗೆ ಪೂರ್ವಾನುಮತಿ ಪಡೆಯುವ ಬಗ್ಗೆ ಪ್ರಸ್ತಾವನೆಯನ್ನು ತಮ್ಮ ಅವಗಾಹನೆಗೆ ಗೌರವಗಳೊಂದಿಗೆ ಸಲ್ಲಿಸಲಾಗಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ.